ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1773.
ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 14-03-2022
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

***

	ಪ್ರಶ್ನೆ	ಉತ್ತರ
ಅ)	E-charging station ಪ್ರಚಾರ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ 2023ರ ಒಳಗೆ ಎಷ್ಟು ಕಡೆ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಸಾಧ್ಯವಾಗುತ್ತಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು E-charging stationಗೆ ಸಂಬಂಧಿಸಿದಂತೆ ಪ್ರಚಾರ ಮಾಡಲು ಹಾಗೂ ವಿದ್ಯುತ್ ವಾಹನಗಳ ಬಗ್ಗೆ ಅರಿವು ಮೂಡಿಸಲು ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಗಿನಂತಿವೆ: ದಿನಪತ್ರಿಕೆಗಳಲ್ಲಿ, ಕಂಪನಿಯ ವೆಬ್-ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ, ಆಕಾಶವಾಣಿಯಲ್ಲಿ ಮಾಹಿತಿಯನ್ನು ಪ್ರಕಟಿಸಲಾಗಿರುತ್ತದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ರಾಜ್ಯ ನೋಡೆಲ್ ಏಜೆನ್ಸಿಯಾಗಿದ್ದು, Bureau of Energy Efficiency (BEE) ಸಹಯೋಗದೊಂದಿಗೆ ದಿನಾಂಕ:13.07.2021 ರಂದು ರಾಜ್ಯ ಸರ್ಕಾರದ ಇಲಾಖೆಗಳಾದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಸಾರಿಗೆ ಇಲಾಖೆ, ಕೆಎಸ್ಆರ್‌ಟಿಸಿ, ಬಿಎಂಟಿಸಿ, ಬಿಎಂಆರ್‌ಸಿಎಲ್, KREDL, ಕರ್ನಾಟಕ ಡಿಸ್ಕಾಂಗಳು ಇತ್ಯಾದಿ, ಹಾಗೆಯೇ ದೇಶದ ಇತರ ರಾಜ್ಯಗಳ ರಾಜ್ಯ ನೋಡಲ್ ಏಜೆನ್ಸಿಗಳನ್ನು ಒಳಗೊಂಡಂತೆ ಮೊದಲ ರಾಜ್ಯ ಮಟ್ಟದ GO ELECTRIC ವೆಬಿನಾರ್ ಅನ್ನು ನಡೆಸಿತು. ದಿನಾಂಕ 18.09.2021ರಂದು ವಿದ್ಯುತ್ ವಾಹನ ಹಾಗೂ ಚಾರ್ಜಿಂಗ್ ಮೂಲಸೌಕರ್ಯ ಪಾಲುದಾರರಾದ ಸರ್ಕಾರಿ ಇಲಾಖೆಗಳು, ಉತ್ಪಾದಕರು, ನಿರ್ವಾಹಕರು, ನಿವಾಸಿಗಳ ಕಲ್ಯಾಣ ಸಂಘಗಳು, ಟ್ಯಾಕ್ಸಿ ಆಪರೇಟರ್‌ಗಳು ಮುಂತಾದವರನ್ನು ಒಳಗೊಂಡಂತೆ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಮಾನ್ಯ ಇಂಧನ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. 2018 ರಿಂದ ಇಲ್ಲಿಯವರೆಗೆ ಬೆಸ್ಕಾಂ ವತಿಯಿಂದ 10 ಚಾರ್ಜಿಂಗ್ ಪಾಯಿಂಟ್‌ಗಳನ್ನು ಹಾಗೂ ಸಾರಿಗೆ ಇಲಾಖೆ ವತಿಯಿಂದ ರೂ.4 ಕೋಟಿ ಅನುದಾನದಲ್ಲಿ 74 ಕೇಂದ್ರಗಳಲ್ಲಿ 126 ಚಾರ್ಜಿಂಗ್ ಪಾಯಿಂಟ್‌ಗಳನ್ನು ಒಳಗೊಂಡಂತೆ ಒಟ್ಟಾರೆ 136 ಚಾರ್ಜಿಂಗ್ ಪಾಯಿಂಟ್‌ಗಳನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲಾಗಿದೆ. ಭಾರತ ಸರ್ಕಾರದ ಫೇಮ್-2 ಯೋಜನೆಯಡಿ ರಾಜ್ಯಕ್ಕೆ 172 ಹಾಗೂ ಅದರಲ್ಲಿ ಬೆಂಗಳೂರು ನಗರಕ್ಕೆ 152, ಮಂಗಳೂರು ನಗರಕ್ಕೆ 10 ಮತ್ತು ಕಲಬುರ್ಗಿ ನಗರಕ್ಕೆ 10 ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದೆ. ಮುಂದುವರೆದು, 17 ಬೆಸ್ಕಾಂ ಸ್ಥಳಗಳಲ್ಲಿ ರಾಜ್ಯದ ಹೆದ್ದಾರಿಗಳಲ್ಲಿ

		ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು Energy Efficiency Services Limited (EESL) ಗೆ ಒಪ್ಪಿಗೆ ನೀಡಿದೆ. ಕರ್ನಾಟಕ ಸರ್ಕಾರವು ತನ್ನ 2021-22 ರ ಬಜೆಟ್ ನಲ್ಲಿ ಪಿಪಿಪಿ ಆಧಾರದ ಮೇಲೆ ರಾಜ್ಯದಲ್ಲಿ 1000 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಬೆಸ್ಕಾಂ ರಾಜ್ಯ ನೋಡೆಲ್ ಏಜೆನ್ಸಿಯಾಗಿದ್ದು 1190 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಕ್ರಿಯಾ ಯೋಜನೆ ಮತ್ತು ಪ್ರಮಾಣಿತ ಬಿಡ್ಡಿಂಗ್ ದಾಖಲೆಗಳನ್ನು ಸಿದ್ಧಪಡಿಸಿದೆ. ಸದರಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಸ್ಥಳ ಗುರುತಿಸಲು ಸರ್ಕಾರದ ವತಿಯಿಂದ ಎಲ್ಲಾ ಇಲಾಖೆಗಳಿಗೆ, ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ಜಾರಿಗೊಳಿಸಿದ್ದು, ಇಲ್ಲಿಯವರೆಗೂ 645 ಸ್ಥಳಗಳನ್ನು ರಾಜ್ಯಾದ್ಯಂತ ಗುರುತಿಸಲಾಗಿದ್ದು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.
ಆ)	ಈ ಯೋಜನೆಗೆ ಕೇಂದ್ರದಿಂದ ಅನುದಾನ ಬಿಡುಗಡೆ ಆಗಿದೆಯೇ; ಅದನ್ನು ಯಾವ ರೀತಿ ಎಷ್ಟು ಪರಿಣಾಮಕಾರಿಯಾಗಿ ಬಳಕೆ ಮಾಡಲಾಗುತ್ತಿದೆ?	ಭಾರತ ಸರ್ಕಾರದ ಫೇಮ್-2 ಯೋಜನೆಯಡಿ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು, ಬೃಹತ್ ಕೈಗಾರಿಕೆಗಳ ಇಲಾಖೆ, ಭಾರತ ಸರ್ಕಾರ ರವರು ಸಾರ್ವಜನಿಕ ಉದ್ಯಮ ವಲಯಗಳ ಸಂಸ್ಥೆಗಳನ್ನು ಗುರುತಿಸಿ ಅವುಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ.

ಸಂಖ್ಯೆ: ಇಎನ್ 72 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1773ಕ್ಕೆ ಅನುಬಂಧ:

Minimum number of locations (district-wise) to be identified for setting up EV Charging Stations (EVCS)

ಕ್ರಮ ಸಂಖ್ಯೆ	ಜಿಲ್ಲೆ	ಚಾರ್ಜಿಂಗ್ ಕೇಂದ್ರಗಳ ಸಂಖ್ಯೆ				ಒಟ್ಟು ಕೇಂದ್ರಗಳು
		2018ರಲ್ಲಿ ಸ್ಥಾಪಿಸಿದ್ದು	2019ರಲ್ಲಿ ಸ್ಥಾಪಿಸಿದ್ದು	2022ರಲ್ಲಿ ಫೇಮ್-2 ಯೋಜನೆಯಡಿ ಪ್ರಸ್ತಾಪಿಸಿದ್ದು	2022ರಲ್ಲಿ ಪಿಪಿಪಿ ಮಾದರಿಯಲ್ಲಿ ಪ್ರಸ್ತಾಪಿಸಿದ್ದು	
1	ಬೆಂಗಳೂರು ನಗರ	04	70	152	150	376
2	ಬೆಂಗಳೂರು ಗ್ರಾಮಾಂತರ				75	75
3	ತುಮಕೂರು				75	75
4	ರಾಮನಗರ				20	20
5	ಕೋಲಾರ				20	20
6	ಚಿಕ್ಕಬಳ್ಳಾಪುರ				20	20
7	ಚಿತ್ರದುರ್ಗ				20	20
8	ದಾವಣಗೆರೆ				75	75
9	ಧಾರವಾಡ				75	75
10	ಹಾವೇರಿ				20	20
11	ಬೆಳಗಾವಿ				75	75
12	ಗದಗ				20	20
13	ವಿಜಯಪುರ				20	20
14	ಬಾಗಲಕೋಟೆ				20	20
15	ಉತ್ತರ ಕನ್ನಡ				20	20
16	ಶಿವಮೊಗ್ಗ				75	75
17	ಉಡುಪಿ				20	20
18	ದಕ್ಷಿಣ ಕನ್ನಡ			10	75	85
19	ಚಿಕ್ಕಮಗಳೂರು				20	20
20	ಹಾಸನ				20	20
21	ಮೈಸೂರು				75	75
22	ಕೊಡಗು				20	20
23	ಚಾಮರಾಜನಗರ				20	20
24	ಮಂಡ್ಯ				20	20
25	ಬೀದರ				20	20
26	ಕಲಬುರ್ಗಿ			10	20	30
27	ರಾಯಚೂರು				20	20
28	ಯಾದಗಿರಿ				20	20
29	ಬಳ್ಳಾರಿ				20	20
30	ವಿಜಯನಗರ				20	20
31	ಕೊಪ್ಪಳ				20	20
	ಒಟ್ಟು	**04**	**70**	**172**	**1190**	**1436**